ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕ:09.06.2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಪ್ರತಿವಾದಿ ಪರ ಶ್ರೀ. ಇ.ಜಿ., ವಕೀಲರಿಂದ.**

ನಾನು ಈ ದಾವೆಯಲ್ಲಿ ಪ್ರತಿವಾದಿ ಇರುತ್ತೇನೆ. ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮುಖಾಂತರ ಸಲ್ಲಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನನಗೆ ತಿಳಿದ ಮಾಹಿತಿಯಂತೆ ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನಾನು ನೀಡಿದ ಮಾಹಿತಿ ಮೇರೆಗೆ ತಯಾರಿಸಲಾಗಿರುತ್ತದೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು, ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿರುತ್ತದೆ.

| | |
|---|---|
| ನಿ.ಡಿ.1 | ಗ್ರಾಂಟ್ ಸರ್ಟಿಫಿಕೇಟ್ |
| ನಿ.ಡಿ.2 ಮತ್ತು 3 | ಸಾಗುವಳಿ ಚೀಟಿಗಳು |
| ನಿ.ಡಿ.4 | ದಿ:30.11.1998 ರ ನೋಟೀಸಿನ ಪ್ರತಿ |
| ನಿ.ಡಿ.5 ರಿಂದ 13 | ಪಹಣಿ ಪತ್ರಿಕೆಗಳು |
| ನಿ.ಡಿ.14 ಮತ್ತು 15 | ಮ್ಯುಟೇಶನ್ ಪ್ರತಿಗಳು |
| ನಿ.ಡಿ.16 | ಮೂಲ ಸರ್ವೆ ಟಿಪ್ಪಣಿ ಪುಸ್ತಕದ ಪ್ರತಿ |
| ನಿ.ಡಿ.17 | ಮೂಲ ಸರ್ವೆ ಪ್ರತಿ |
| ನಿ.ಡಿ.18 | ಸರ್ವೆ ಪಕ್ಕಾ ಪುಸ್ತಕದ ಪ್ರತಿ |
| ನಿ.ಡಿ.19 | ಪಟ್ಟಾ ಪುಸ್ತಕ |
| ನಿ.ಡಿ.20 | ಕಂದಾಯ ರಶೀದಿ |

ಪಾಟೀ ಸವಾಲು: (ವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

ಪ್ರಧಾರನ ಸಿವಿಲ್ ನ್ಯಾಯಾಧೀಶರು ಮತ್ತು
*ಜೆ.ಎಂ.ಎಫ್.ಸಿ. ಶ್ರೀನಿವಾಸಪುರ.*